ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 60-67
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ‘ಗೌರ್ಮೆಂಟ್ ಬ್ರಾಹ್ಮಣ’ ಮತ್ತು ‘ಉಚಲ್ಯಾ’ ಆತ್ಮಕಥೆಗಳ ಸಾಮಾಜಿಕ ಬದುಕಿನ ಚಿತ್ರಣ

**ಅಶೋಕ ಜಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***
*ಕನ್ನಡದ ಮೊಟ್ಟ ಮೊದಲ ದಲಿತ ಆತ್ಮಕಥೆಯಾದ ‘ಗೌರ್ಮೆಂಟ್ ಬ್ರಾಹ್ಮಣ’ವು ತನ್ನ ವಿಶಿಷ್ಟತೆಯಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಬಹುಚರ್ಚಿತ ಆತ್ಮಕಥೆಯಾಗಿದೆ. ಇಲ್ಲಿ ಅರವಿಂದ ಮಾಲಗತ್ತಿ ಅವರು ದಲಿತ ಲೋಕದ ಚಿತ್ರಣವನ್ನು ಕಟ್ಟಿಕೊಡುತ್ತಾರೆ. ಆತ್ಮಕಥೆಯು ಅವಮಾನದಿಂದಲೇ ಆರಂಭವಾಗಿ ಅವಮಾನದಿಂದಲೇ ಮುಗಿಯುತ್ತದೆ. ಲೇಖಕರು ಆತ್ಮಕಥೆಗಳ ಮೂಲಕ ಅವರ ಜೀವನದಲ್ಲಾದ ಘಟನೆಗಳನ್ನು ಕಣ್ಣಿಗೆ ಹೊತ್ತಿದಂತೆ ಕಟ್ಟಿ ಕೊಟ್ಟಿದ್ದಾರೆ. ‘ಉಚಲ್ಯಾ’ ಕೃತಿಯು ಮರಾಠಿ ದಲಿತ ಆತ್ಮಕಥೆಗಳಲ್ಲಿಯೇ ಒಂದು ಮಹತ್ವದ ಸ್ಥಾನಮಾನವನ್ನು ಪಡೆದಿರುವಂತಹದ್ದು. ಇದು ಲಕ್ಷ್ಮಣ ಗಾಯಕವಾಡರವರ ಆತ್ಮಕಥೆಯಾಗಿದೆ. ಈ ಆತ್ಮಕಥೆಯು ಭಾರತೀಯ ವರ್ಣವ್ಯವಸ್ಥೆಯಲ್ಲಿ ಅತ್ಯಂತ ಕೆಳಹಂತದಲ್ಲಿ ಗುರುತಿಸಲಾದ ದಲಿತ ಸಮುದಾಯಕ್ಕೆ ಸೇರಲ್ಪಡುವ ಒಂದು ಅಲೆಮಾರಿ ಜನಾಂಗದ ಕಥೆಯಾಗಿದೆ. ಈ ಎರಡೂ ಆತ್ಮಕಥೆಗಳು ದಲಿತರ ಬದುಕನ್ನು ಅನಾವರಣಗೊಳಿಸಿವೆ.*

**Keywords:** *ಸಾಮಾಜಿಕ ಅಸಮಾನತೆ, ಶೋಷಣೆ, ಕನ್ನಡ ಸಾಹಿತ್ಯ, ದಲಿತ ಆತ್ಮಕಥೆ, ಗೌರ್ಮೆಂಟ್ ಬ್ರಾಹ್ಮಣ, ಉಚಲ್ಯಾ.*

## ಪೀಠಿಕೆ

ಅರವಿಂದ ಮಾಲಗತ್ತಿ ಈಗಾಗಲೇ ಕವಿಯಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ ಹಾಗೂ ದಲಿತ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟ ಕವಿ ಎಂದು ಗುರುತಿಸಿಕೊಂಡಿದ್ದಾರೆ. ಕನ್ನಡದ ಮೊದಲ ದಲಿತ ಆತ್ಮಕಥೆ ಎಂಬ ಹೆಗ್ಗಳಿಕೆಗೆ ಗುರಿಯಾದ ‘ಗೌರ್ಮೆಂಟ್ ಬ್ರಾಹ್ಮಣ’ ಎಂಬ ಹೆಸರು ಸಾಕಷ್ಟು ವಿವಾದಕ್ಕೆ ಒಳಗಾಗಿದ್ದನ್ನು ತಿಳಿಯಬಹುದು. ಈ ಆತ್ಮಕಥೆಯಲ್ಲಿ ಹಸಿವಿನ ಹಾಹಾಕಾರವನ್ನು ಬಡತನದ ಹೋರಾಟದ ಬದುಕನ್ನು ಲೇಖಕರು ದಾಖಲಿಸಿದ್ದಾರೆ.

ದಲಿತರ ಕಥೆಗಳಲ್ಲಿ ಹಸಿವು ಪ್ರಧಾನ ಸಮಸ್ಯೆಯಾಗಿದ್ದು. ಹಸಿವನ್ನು ತೀರಿಸುವ ಯತ್ನಗಳು ಅದರೊಂದಿಗೆ ಎದುರಾಗುವ ಅವಮಾನ ತಿರಸ್ಕಾರಗಳು ತನ್ನೆಲ್ಲಾ ಕರಾಳ ಮುಖದಿಂದ ಚಿತ್ರಿಸಲ್ಪಡುತ್ತವೆ. ಕನ್ನಡದ ದಲಿತ ಸಾಹಿತ್ಯವನ್ನು ಅವಲೋಕಿಸಿದಾಗ, ದಲಿತರು ತಮ್ಮ ಸಂವೇದನೆಗಳನ್ನು, ಕಟು ಮಧುರ ಅನುಭವಗಳನ್ನು ಕಥೆ, ಕಾವ್ಯ, ಕಾದಂಬರಿಯಲ್ಲಿ ವ್ಯಕ್ತಪಡಿಸಿರುವರೇ ಹೊರತು, ಆತ್ಮಚರಿತ್ರೆಯನ್ನು ಬರೆಯುವ ಸಾಹಸಕ್ಕೆ ಕೈ ಹಾಕಿರಲಿಲ್ಲ, ಆದರೆ ಇತ್ತೀಚೆಗೆ ಅವರು ತಮ್ಮ ನೋವು, ನಲಿವುಗಳನ್ನು ಆತ್ಮಕಥೆ ಬರೆಯುವುದರ ಮೂಲಕ ಹಿಡಿದಿಡುತ್ತಿದ್ದಾರೆ. ಮಾಲಗತ್ತಿಯವರು ತಾವು ಆತ್ಮಚರಿತ್ರೆಯನ್ನು ಬರೆದುಕೊಂಡ ಕುರಿತು ಈ ರೀತಿ ಹೇಳುತ್ತಾರೆ. “ನಾನು ಮೊದಲೇ ಸ್ಪಷ್ಟ ಮಾಡಬಯಸುವ ವಿಷಯವೆಂದರೆ, ನನ್ನ

**Please cite this article as:** ಅಶೋಕ, ಜಿ. (2023). ‘ಗೌರ್ಮೆಂಟ್ ಬ್ರಾಹ್ಮಣ’ ಮತ್ತು ‘ಉಚಲ್ಯಾ’ ಆತ್ಮಕಥೆಗಳ ಸಾಮಾಜಿಕ ಬದುಕಿನ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 60–67.

ಆತ್ಮಕಥೆಯ ಕೆಲವು ಪುಟಗಳನ್ನು ನಿಮ್ಮ ಮುಂದಿಟ್ಟು, ನಾನೊಬ್ಬ ಮಹಾತ್ಮ ಎಂದು ಕರೆಯಿಸಿಕೊಳ್ಳುವ ಭ್ರಮೆ ನನಗಿಲ್ಲ. ನಾನೊಬ್ಬ ಸಾಮಾನ್ಯ ಮನುಷ್ಯ ಹೀಗೆಂದ ಮಾತ್ರಕ್ಕೆ ಇಲ್ಲಿಯ ಅನುಭವಗಳು ಒಬ್ಬ ಸಾಮಾನ್ಯ ಮನುಷ್ಯನ ಅನುಭವಗಳೇ ಆಗಿವೆ ಎನ್ನುವ ಮಾತನ್ನು ಹೇಳಲಾರೆ. ಆದರೆ ಸಾಮಾನ್ಯ ದಲಿತನೊಬ್ಬನ ಅನುಭವಗಳಾಗಿವೆ ಎನ್ನುವದನ್ನು ಹೇಳದಿರಲಾರೆ. ಒಬ್ಬ ದಲಿತನಿಗೆ ಇರಬಹುದಾದ ಎಲ್ಲ ಆಸೆ–ಆಕಾಂಕ್ಷೆಗಳು, ಅರೆಕೊರೆಗಳು ನನ್ನಲ್ಲಿವೆ. ಆದರೆ ಅಳೆದು ಹೇಳಲು ಯಾವ ಮಾನದಂಡವೂ ಸಾಲದು. ಹೀಗೆಂದು ಕೈಚೆಲ್ಲಿ ಕೂಡುವುದು ನನ್ನ ಉದ್ದೇಶವಲ್ಲ"[1] ಎಂದು ವಿವರಿಸಿ, ತಮ್ಮ ಬದುಕಿನ ನೋವು ನಲಿವುಗಳನ್ನು ಈ ಆತ್ಮಚರಿತ್ರೆಯಲ್ಲಿ ಹಿಡಿದಿಟ್ಟಿದ್ದಾರೆ. ರಹಮತ್ ತರೀಕೆರೆಯವರು ಗೌರ್ಮೆಂಟ್ ಬ್ರಾಹ್ಮಣ ಆತ್ಮಕಥೆಯಲ್ಲಿ ಬಾಲ್ಯ ಚಿತ್ರಣವನ್ನು ಹೀಗೆ ಹೇಳಿದ್ದಾರೆ, "ಹೆಣದ ಮೇಲಿನ ದುಡ್ಡು ಮತ್ತು ಮದುವೆಯ ಊಟದಿಂದ ಹಿಡಿದು ನನ್ನ ಕೇರಿ ನನ್ನ ಓದು"[2] ಇಲ್ಲಿಯವರೆಗೆ ಲೇಖಕರ ಬಾಲ್ಯ ಹಾಗೂ ಕೇರಿಯ ಚಿತ್ರಣ ಬರುತ್ತದೆ ಎಂದು ತಿಳಿಸಿದ್ದಾರೆ.

ಮಾಲಗತ್ತಿಯವರ ಬಾಲ್ಯದ ಘಟನೆಗಳನ್ನು ಓದಿದಾಗ ಆಶ್ಚರ್ಯವುಂಟಾಗುತ್ತದೆ. ಅವರ ಅನುಭವಗಳು ರೋಮಾಂಚನಗೊಳಿಸುತ್ತವೆ. ಅವರ ಊರಿನಲ್ಲಿ ಶ್ರೀಮಂತ ಜನರು ಹೆಚ್ಚಂತೆ. ಅಂತವರ ಮನೆಯಲ್ಲಿ ಮಕ್ಕಳು ಹುಟ್ಟಿದರೆ, ಯಾರಾದರೂ ಸತ್ತರೆ, ದಲಿತರಿಗೆಲ್ಲಾ ಸಂತೋಷವಾಗುತ್ತಿತ್ತಂತೆ. ಸತ್ತ ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಹೆಣದ ಮೇಲೆ ತೂರುವ ಹಣ ಆರಿಸಿಕೊಳ್ಳಲು ಕಚ್ಚಾಟ, "ವಯಸ್ಸಾದ ನಮ್ಮ ಜನ ಅವರೆಲ್ಲ ದಾಟಿ ಹೋಗುವುದೆ ತಡ, ಸ್ಪರ್ಧೆಗಿಳಿದು ಆ ಪುಡಿಗಾಸನ್ನು ಆಯ್ದುಕೊಳ್ಳುತ್ತಿದ್ದರು. ಚಿಕ್ಕವರಾದ ನಾವು ಅವರ ನಿಯಮಗಳನ್ನು ಮುರಿದು, ನಮ್ಮ ಹಿರಿಯರಿಗಿಂತ ಮುಂದೆ ಹೋಗಿ ತೂರಿದ ಹಣ ನೆಲಕ್ಕೆ ಬೀಳುವುದಕ್ಕಿಂತ ಮುಂಚಿತವಾಗಿಯೇ ಹಿಡಿಯಲು ಪ್ರಯತ್ನಿಸಿ ಸೋಲುತ್ತಿದ್ದವು. ಕಾಸು ನೆಲಕ್ಕೆ ಬಿದ್ದಾಗ ಅವರು ದಾಟುವ ಮುನ್ನವೆ ಅವರ ಕಾಲಲ್ಲಿ ಹೋಗಿ ಆ ನಾಣ್ಯವನ್ನು ಎತ್ತಿಕೊಳ್ಳುತ್ತಿದ್ದೆವು" ಎನ್ನುತ್ತಾರೆ, ಇದು ಲೇಖಕರ ಬದುಕು ಮಾತ್ರವಲ್ಲ ಇಡೀ ದಲಿತರ ಬದುಕನ್ನೇ ಚಿತ್ರಿಸುತ್ತದೆ. ಅವರ ಬದುಕಿನ ಇನ್ನೊಂದು ಪ್ರಸಂಗ. ಊಟಕ್ಕೆ ಹೋದಾಗಿನ ಘಟನೆ ಹೇಳುತ್ತಾರೆ. 'ಒಮ್ಮೆ ಶೇಠ್‌ಜಿಯವರ ಮಗಳ ಮದುವೆಯಿತ್ತಂತೆ, ಅಂತಹ ಸಮಯದಲ್ಲಿ ಎಲ್ಲರ ಊಟವಾದ ನಂತರ ದಲಿತರಿಗೂ ಊಟಕ್ಕೆ ಹಾಕುವ ಸಂಪ್ರದಾಯ. ಆದರೆ ಅದಕ್ಕೆ "ಕೆಲವೊಂದು ನಿಬಂಧನೆಗಳು, ಊಟಕ್ಕೆ ಹೋದಾಗ ತಟ್ಟೆಗೆ ಹೆಚ್ಚಿಗೆ ಹಾಕಿಸಿಕೊಳ್ಳುವಂತಿಲ್ಲ. ತಿನ್ನಲು ಎಷ್ಟು ಸಾಧ್ಯವೋ ಅಷ್ಟನ್ನು ಈಸಿಕೊಳ್ಳಬೇಕು. ಮನೆಗೆ ಕಟ್ಟಿಕೊಂಡು ಹೋಗುವಂತಿಲ್ಲ. ಊಟ ಮುಗಿಸಿ ಮನೆಗೆ ಹೋಗುವಾಗ ಪಾತ್ರೆಯಲ್ಲಿಟ್ಟ ಬಣ್ಣದಲ್ಲಿ ಕೈಅದ್ದಿ ಹೋಗಬೇಕು. ಯಾಕೆಂದರೆ ಎರಡನೆ ಸಲ ಊಟಕ್ಕೆ ಬರಬಾರದೆಂದು, ಹೀಗೆ ಶ್ರೀಮಂತರ ತಂತ್ರಗಳನ್ನು ಬುಡಮೇಲು ಮಾಡುವ ತಂತ್ರವನ್ನು ಮಾಲಗತ್ತಿಯವರ ಅಜ್ಜಿ (ಆಯಿ) ಹುಡುಕುತ್ತಿದ್ದಳಂತೆ. ಆ ದಿನ ತಲೆಗೆ ಎಣ್ಣೆ ಹಚ್ಚಿಕೊಂಡು ಹೋಗುವುದು, ಬಣ್ಣ ಅದ್ದಿದ ಕೈಯನ್ನು ತಲೆಗೆ ತಿಕ್ಕಲು ಹೇಳುತ್ತಿದ್ದಳಂತೆ. ಹೀಗೆ ಹೊಟ್ಟೆ ಹೊರೆಯಲು ಅವರು ಮಾಡುತ್ತಿದ್ದ ತಂತ್ರಗಳಲ್ಲಿ ವಿನೋದ ಕಂಡು ಬಂದರೂ, 'ಎಂದೋ ಒಮ್ಮೆ ಎಣ್ಣೆ ಕಾಣುವ ತಲೆ ಅಂದು ಅವಶ್ಯವಾಗಿ ಎಣ್ಣೆ ಕಾಣುತ್ತಿತ್ತು"[3] ಎಂಬ ಮಾತಾಗಲಿ, ಶ್ರೀಮಂತರು ಕೋಲು ಹಿಡಿದು ಹೊಡೆಯಲು ನಿಂತಾಗ, ಹಂದಿ ನಾಯಿಗೆ ಹೊಡೆಯಲು ಅದೇ ಕೋಲು ದಲಿತರಿಗೂ ಹೊಡೆಯಲು ಅದೇ ಕೋಲು ಎಂಬ ಮಾತಾಗಲಿ, ಅವರ ಮಾತಿನ ಹಿಂದೆ ಎಷ್ಟೊಂದು ನೋವಿದೆ ಎಂಬುದನ್ನು ತಿಳಿಸುತ್ತದೆ. ಇನ್ನು ಶಾಲೆಗೆ ಹೋಗುವಾಗ, ಅಂದು ಶಾಲೆಯಲ್ಲಿ ಕೊಡುತ್ತಿದ್ದ ಕಠಿಣ ಶಿಕ್ಷೆಯನ್ನು ತಿಳಿಸುತ್ತಾರೆ. ಗೂಟಕ್ಕೆ ಕೈಯನ್ನು ತೂಗು ಹಾಕಿ ಬಿಡುವುದು ಮೊಣಕಾಲು ಅರ್ಧ ಮಡಿಸಿ ಕುರ್ಚಿಯ ಹಾಗೆ ನಿಂತುಕೊಳ್ಳುವುದು,

ಅದರಲ್ಲೇನಾದರೂ ಹೆಚ್ಚು ಕಮ್ಮಿ ಮಾಡಿದರೆ ನೆತ್ತರು ಬರುವಂತೆ ಹೊಡೆಯುವುದು. ಇವೆಲ್ಲಾ ಶಿಕ್ಷಕರು ಕೊಡುತ್ತಿದ್ದ ದೈಹಿಕ ದಂಡನೆಗಳಾದರೆ, ಮಾನಸಿಕ ನೋವು ಕೂಡಾ ಶಾಲೆಯಲ್ಲಿ ಆಗುತ್ತಿತ್ತು. ಶಾಲೆಯಲ್ಲಿ ದಲಿತರು ಕೂಡುವ ಸ್ಥಳವೇ ಬೇರೆ, ಅಲ್ಲದೆ, ಬೇರೆ ಹುಡುಗರು ಮಾಲಗತ್ತಿ ಎಂಬ ಅವರ ಅಡ್ಡ ಹೆಸರನ್ನು 'ಮಾಲಕತ್ತಿ' ಎಂದು ಬರೆದು ಅಪಹಾಸ್ಯ ಮಾಡುತ್ತಿದ್ದರಂತೆ. ಅದನ್ನು ಗುರುಗಳಿಗೆ ಹೇಳಿದರೆ, ಕಾರಣ ಕೇಳುವ ತಾಳ್ಮೆಯನ್ನು ತಂದುಕೊಳ್ಳದ ಅವರನ್ನೆ ಥಳಿಸುತ್ತಿದ್ದರಂತೆ, ಅಷ್ಟೇ ಅಲ್ಲ, "ಕತ್ತಿ ಅಂತ ಬರದ್ರ ಏನಾಯ್ತು, ಕತ್ತಿ ಕತ್ತಿನೇ, ಕತ್ತೆಲ್ಲೆರ ಕುದುರಾಕ್ಕದೇನ, ಕತ್ತಿಗೆಲ್ಲ ಯಾಕ ಬೇಕು ಹತ್ತಿಕಾಳನೀರ"[4] ಎಂದು ಮನ ತುಂಬುವಂತೆ ಹೊಡೆದ ಗುರುಗಳ ನೆನಪು ಕೂಡಾ ಅಚ್ಚಳಿಯದೆ ಉಳಿದಿದೆ ಎನ್ನುತ್ತಾರೆ. ಈ ಪ್ರಸಂಗ ಅಂಬೇಡ್ಕರರನ್ನು ನೆನಪಿಗೆ ತರುತ್ತದೆ. ಲೇಖಕರು ತಮ್ಮೂರಿನ ಹಳ್ಳಕೊಳ್ಳದ ಬಗ್ಗೆ, ದಲಿತರ ಕೇರಿಗಳ ಬಗ್ಗೆ, ಬಾವಿಗಳ ಬಗೆಗೆ ವಿವರಣೆ ನೀಡುತ್ತಾರೆ. ಕೆರೆಗೆ ಹೆಂಗಸರು ಬಟ್ಟೆ ತೊಳೆಯಲು ಹೋದಾಗಲೂ ಯಾವ ರೀತಿ ಜಗಳವಾಡುತ್ತಿದ್ದರೆಂಬುದನ್ನು ತಿಳಿಸುತ್ತಾರೆ. ಹತ್ತಿಯನ್ನು ಕದ್ದು ಲಾಡು ತಿಂದಾಗ, ಬಿದ್ದ ಬಾರಕೋಲಿನ ಏಟಿನ ನೆನಪು ಅಚ್ಚಳಿಯದೆ ಉಳಿದಿದೆ. ಕದಿಯಲು ಪ್ರೇರೆಪಿಸಿದ ಅಂಗಡಿಯ ತಾತ ಹಾಗೂ ಆತನ ಅಂಗಡಿಯಲ್ಲಿದ್ದ ಮತ್ತೊಬ್ಬ ಮನುಷ್ಯನಿಗೂ ಏಟು ಸಂದಬೇಕಲ್ಲವೇ? ಎಂಬ ಲೇಖಕರ ಪ್ರಶ್ನೆಗೆ ಉತ್ತರ? ಇಂತಹ ಲೇಖಕರ ಅನುಭವಗಳು ಸಮಾಜದಲ್ಲಿ ಕಂಡು ಬರುವ ತಾರತಮ್ಯತೆಯನ್ನು ಎತ್ತಿ ತೋರಿಸುತ್ತವೆ. ಆದರೆ ಈ ಪ್ರಪಂಚದಲ್ಲಿ ಹೆದರುವವರಿಗೆ ಹೆದರಿಸುವುದು ಹೆಚ್ಚು. ಮುಂದೆ ಲೇಖಕರು ತಾವು ಕಂಡ ವಿಚಿತ್ರವಾದ, ಅತಿ ಭಯಂಕರವಾದ ಸಮಾಜದಲ್ಲಿಯ ಕೆಲವು ಸಂಪ್ರದಾಯಗಳನ್ನು ತಿಳಿಸುತ್ತಾರೆ. ಅದರಲ್ಲಿ ಓಕುಳಿ ಪ್ರಸಂಗವು ಒಂದು. ಆಗ ದಲಿತ ಹೆಂಗಸರು ಕುಪ್ಪಸವನ್ನು ಕಳೆದು ಬರೀ ಸೀರೇ ಉಟ್ಟುಕೊಳ್ಳುತ್ತಾರೆ. ಗಂಡಸರು, ಅರಿಸಿಣ ಕುಂಕುಮ ಕೂಡಿದ ಹೊಂಡದ ನೀರನ್ನು ಹೆಂಗಸರಿಗೆ ಉಗ್ಗುತ್ತಾರೆ. ಹೆಂಗಸರು, ಗಂಡಸರಿಗೆ ಜಬರಿನಿಂದ ಹೊಡೆಯಲು ಓಡಾಡುತ್ತಾರೆ. ಈ ರೀತಿಯ ಕ್ರೀಡೆಯಲ್ಲಿ ಇರುವ ಹೆಂಗಸರು ಮಾತ್ರ ದಲಿತರು, ಮನರಂಜನೆಯ ನೆಪದಲ್ಲಿ ಕಾಮದ ದೃಷ್ಟಿಯಿಂದ ನೋಡುವ ಗಂಡಸರ ಅಂತರಂಗದ ಸ್ವಭಾವವನ್ನು ಲೇಖಕರು ಇಲ್ಲಿ ತಿಳಿಸುತ್ತಾರೆ. ಹಾಗೆ ಮಾಡದಿದ್ದರೆ ಊರಿಗೆ ಮಳೆ ಬರುವುದಿಲ್ಲ. ಶನಿಯ ಕಾಟ ತಪ್ಪುವುದಿಲ್ಲ ಎಂಬ ಕುರುಡು ನಂಬಿಕೆ, ಅಲ್ಲದೆ ಮೇಲು ಜಾತಿಯವರೆನಿಸಿಕೊಂಡು, ಜನಿವಾರ ಶಿವದಾರ ಹಾಕಿಕೊಂಡು ಗೌಪ್ಯವಾಗಿ ಮಾಡುವ ಅವರ ಕೃತ್ಯಗಳ ಬಗೆಗೆ ಹೇಳುತ್ತಾರೆ. ಅಲ್ಲದೆ ಕೆಲವು ಜನ ಹಿಂದೆ ಕೀಳುಜಾತಿಯವರಾಗಿದ್ದು, ಮತಾಂತರ ಹೊಂದಿದ್ದು ಕಂಡು ಬರುತ್ತದೆ. ಮಾಲಗತ್ತಿಯವರ ಕುಟುಂಬದವರೂ ಕೂಡಾ ಮತಾಂತರ ಹೊಂದಿ ಲಿಂಗಧಾರಣೆ ಮಾಡಿರುವುದಾಗಿ ಲೇಖಕರು ತಿಳಿಸುತ್ತಾರೆ. ಲಿಂಗ ಪಡೆದ ಮೇಲೆ ಲೇಖಕರ ತಾಯಿ ಕಟ್ಟುನಿಟ್ಟಾದ ಶರಣೆಯಂತಿದ್ದರಂತೆ, ಶಾಖಾಹಾರ ಸೇವಿಸುವುದು, ವ್ರತಗಳನ್ನು ಮಾಡುವುದು. ಈಗ ಮೇಲು ಜಾತಿಯವರಿಗಿಂತ ಕಡಿಮೆಯೇನೂ ಇಲ್ಲ ಎಂದು ತಿಳಿಸುವ ಲೇಖಕರು ತಾವು ಮಾತ್ರ ತಮ್ಮ ಜಾತಿಯನ್ನು ಡಂಗುರ ಸಾರಿದಂತೆ ಹೇಳಿಕೊಂಡು ತಿರುಗುತ್ತೇವೆ ಎನ್ನುತ್ತಾರೆ.

**ಉಚಲ್ಯಾ ಲಕ್ಷ್ಮಣ ಗಾಯಕವಾಡರ ಆತ್ಮಚರಿತ್ರೆ**

ಮರಾಠಿ ದಲಿತ ಆತ್ಮಕಥೆಗಳಲ್ಲಿಯೇ ಒಂದು ಮಹತ್ವದ ಸ್ಥಾನಮಾನವನ್ನು ಪಡೆದಿರುವಂತದ್ದು ಉಚಲ್ಯಾ ಕೃತಿ. ಇದು ಲಕ್ಷ್ಮಣಗಾಯಕವಾಡರವರ ಆತ್ಮಕಥೆಯಾಗಿದೆ. ಈ ಆತ್ಮಕಥೆಯು ಭಾರತೀಯ ವರ್ಣವ್ಯವಸ್ಥೆಯಲ್ಲಿ ಅತ್ಯಂತ ಕೆಳಹಂತದಲ್ಲಿ ಗುರುತಿಸಲಾದ ದಲಿತ ಸಮುದಾಯಕ್ಕೆ ಸೇರಲ್ಪಡುವ ಒಂದು ಅಲೆಮಾರಿ ಜನಾಂಗದ ಕಥೆಯಾಗಿದೆ. ಈ ಜನಾಂಗವನ್ನು ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು 'ಕ್ರಿಮಿನಲ್ ಟ್ರೈಬ್' ಎಂಬ ಹೆಸರಿನಿಂದ

ಗುರುತಿಸುತ್ತಿದ್ದರು ಈ ಕಾರಣದಿಂದಾಗಿ ಇವರಿಗೆ ಜೀವನ ನಡೆಸಲು ಯಾವುದೇ ಉದ್ಯೋಗ ಸಿಗುತ್ತಿರಲಿಲ್ಲ. ಈ ಪರಿಸ್ಥಿತಿಯನ್ನು ಎದುರಿಸಿ ಬದುಕಲು ಈ ಜನಾಂಗದವರು ಅನಿವಾರ್ಯವಾಗಿ 'ಕಳ್ಳತನ'ವನ್ನು ಪ್ರಮುಖವಾದ ವೃತ್ತಿಯಾಗಿಸಿ ಕೊಂಡರು. ಈ ಜನಾಂಗದ ಭಾಷೆ ತೆಲುಗು, ಸಾಮಾನ್ಯವಾಗಿ ಇದು ಮರಾಠಿ ಮಿಶ್ರಿತವಾಗಿರುತ್ತದೆ. ಇವರನ್ನು 'ಸಂತಾಮುಚ್ಚರು' ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಅಂದರೆ ತೆಲುಗಿನಲ್ಲಿ 'ಸಂತೆಕಳ್ಳ' ಎಂಬರ್ಥವಿದೆ. ಈ ಜನಾಂಗದವರನ್ನು 'ಜಂಗಮ' ಅಲೆಮಾರಿಗಳು ಎಂದು ಗುರುತಿಸಲಾಗುತ್ತದೆ. ಈ ಜನಾಂಗದಲ್ಲಿ ಅನೇಕ ರೀತಿಯ ಒಳಪಂಗಡಗಳನ್ನು ಗುರುತಿಸಬಹುದಾಗಿದ್ದು, ಇವುಗಳಲ್ಲಿ "ಉಳೋನೋರ, ಬುಮೋನಿರು, ಕಾಳಪಿಟನೋರ ಒಂದು ಪಂಗಡ. ಕಾಸಕೋನೋರ, ಪಪ್ಪೋನೋರ, ಇಲೇನೋರ ಇನ್ನೊಂದು ಪಂಗಡ. ಮಹಾರಾಷ್ಟ್ರದಲ್ಲಿ ಇವರನ್ನು ಪಾಥರೂಟ, ಟಕಾರಿ, ಭಾಮಟಾ ಉಚಲೆ ಗಿರವೆ ವಡಾರ, ಗಂಟಚೋರ, ವಾಡರ, ಎಂಬ ಅನೇಕ ಹೆಸರುಗಳಿಂದ ಗುರುತಿಸುತ್ತಾರೆ."[5.] ಹೀಗಾಗಿ ಉಳಿದ ಸಮಾಜ ಅವರನ್ನು ಗುನ್ಹೇಗಾರರೆಂದು ಗುರುತಿಸಲಾರಾಂಭಿಸಿತು. ಉಪಜೀವನದ ಎಲ್ಲ ಮಾರ್ಗಗಳು ಮುಚ್ಚಿದ್ದರಿಂದ ನಾವು ಅನಿವಾರ್ಯವಾಗಿ ಕಳ್ಳತನಕ್ಕಿಳಿಯಬೇಕಾಯಿತು. ಕಳ್ಳತನವೊಂದೇ ನಮ್ಮ ಜನರ ಎದುರಿಗಿರುವ ಏಕೈಕ ಮಾರ್ಗ. ನಮ್ಮ ಮೇಲೆ ಬಲವಂತದಿಂದ ಹೇರಿದ ಈ ವ್ಯವಸಾಯದ ಉಪಯೋಗವನ್ನು ಮೇಲ್ವರ್ಗದ ಜನ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರು ಎಂದು ಲೇಖಕರೇ ಹೇಳುತ್ತಾರೆ. ಹೊಲ ಮನೆಯಿಲ್ಲ. ನಿಶ್ಚಿತವಾದ ಒಂದು ಊರಿಲ್ಲ. ಅಷ್ಟೇ ಏಕೆ ಜಾತಿಯೂ ಇಲ್ಲದಂಥ, ಒಂದು ಅಲೆಮಾರಿ ಪಂಗಡದಲ್ಲಿ ಲಾತೂರ ತಾಲೂಕಿನ ಧನೇಗಾಂವ ಎಂಬ ಊರಲ್ಲಿ ಜನಿಸಿದೆ. ನನ್ನ ಮನೆ ಹುಲ್ಲುಗರಿಕೆಯ ಒಂದು ಗುಡಿಸಲಿನಂತಿತ್ತು, ಅದು ಗುಬ್ಬಿಯ ಗೂಡಿನಂತೆ ಭಾಸವಾಗುತ್ತಿತ್ತು. ಮನೆಯೊಳಗೆ ಪ್ರವೇಶಿಸುವಾಗ ಸೊಂಟ ಬಗ್ಗಿಸಬೇಕಾಗಿತ್ತು ಎಂದು ಪ್ರಾರಂಭವಾಗುವ ಈ ಆತ್ಮಕಥೆಯಲ್ಲಿ ಬಡತನದ ಚಿತ್ರಣ ಮೂಡಿ ಬಂದಿದೆ. ಇಡೀ ಸಂಸಾರದ ಹೊಣೆ ಅಜ್ಜಿ ನರಸಾಬಾಯಿಯದು. ಅಜ್ಜನದೇನು ಅಂತಹ ಗಳಿಕೆ ಇರಲಿಲ್ಲ. ದಿನಕ್ಕೆರಡು ಬಾರಿ ಸ್ಟೇಶನ್ನಿಗೆ ಹಾಜರಾಗಬೇಕಿತ್ತು. ಮೊದಲು ಅಜ್ಜನಾದ ಲಿಂಗಪ್ಪನೇ ಮನೆಯ ಜವಾಬ್ದಾರಿ ಹೊತ್ತಿದ್ದನಂತೆ. ಅವನ ಕೆಲಸ ದೂರದೂರದ ಸಂತೆಗೆ ಹೋಗಿ, ಸಂತೆಗಳಲ್ಲಿ ಕಿಸೆ ಕತ್ತರಿಸಿ, ಗಂಟು ಕದ್ದು ತರುವುದೇ ಆಗಿತ್ತು. ಇಂತಹ ಉಸಿರು ಕಟ್ಟುವಂತಹ ವಾತಾವರಣದಲ್ಲಿ ಜನಿಸಿದ ಲಕ್ಷ್ಮಣ ಗಾಯಕವಾಡರು ಬದುಕಿನುದ್ದಕ್ಕೂ ಪಡೆದ ಅನುಭವಗಳು, ಸುತ್ತಮುತ್ತಲಿನ ಉಚಲ್ಯಾ ಜನರ ದಾರಿದ್ರ, ಸಂಕಟ, ವೇದನೆಗಳನ್ನು ನೋಡುತ್ತಲೇ ಬಂದಿದ್ದರಿಂದ ತಮ್ಮ ವೈಯಕ್ತಿಕ ಬದುಕಿನ ಜೊತೆಗೆ ತಮ್ಮ ಜನಾಂಗದ ಕತೆಯನ್ನು ಹೇಳುತ್ತಾರೆ. ಮನೆ ಖರ್ಚು ಸಾಗಿಸಲು ಹೆಣ್ಣು ಮಕ್ಕಳು ಕೂಡಾ ಕಳ್ಳತನ ಮಾಡುತ್ತಾರೆ. ಜೇಬು ಕತ್ತರಿಸುವ ಭಾರತ ಬ್ಲೇಡು ಇವರ ಪಾಲಿಗೆ ಲಕ್ಷ್ಮಿ, ಕಳ್ಳತನಕ್ಕೆ ಹೊರಡುವ ಮೊದಲು ಭಾರತ ಬ್ಲೇಡಿಗೆ ಕೋಳಿ ಬಲಿ ಕೊಡುತ್ತಿದ್ದರು. ಅದೇ ಬ್ಲೇಡಿನಿಂದ ಕೋಳಿ ಕತ್ತರಿಸಿ ರಕ್ತವನ್ನು ಬ್ಲೇಡಿನ ಮೇಲೆ 'ಉಳಿದವರ ತಲೆ ಮೇಲೆ ಸಿಂಪಡಿಸಿ, "ಹೇ ದೇವರೆ ಕಳ್ಳತನದಲ್ಲಿ ಯಶಸಿಗಲಿ, ಪೋಲಿಸರಿಂದ ಪಾರುಮಾಡು ಎಂದು ಪ್ರಾರ್ಥಿಸಿ ಬ್ಲೇಡಿಗೆ ನಮಸ್ಕರಿಸುತ್ತಿದ್ದೆವು."[6] ಎನ್ನುವಲ್ಲಿ ಕಳ್ಳತನದ ಕಸಬಾದರೂ ಅದನ್ನು ಶ್ರದ್ಧೆಯಿಂದ ಮಾಡುವ ರೀತಿ ಕಾಣುತ್ತದೆ. ಇಂತಹ ಸಮಾಜಿಕ ಸನ್ನೀವೇಶದಲ್ಲಿ ಕಳ್ಳತನದ ಗಂಭೀರ ಪರಿಣಾಮ ಅರಿತ ಗಾಯಕವಾಡರ ತಂದೆ, ಮಗನ ಕೈಗೆ ಬ್ಲೇಡಿನ ಬದಲು 'ಸ್ಲೇಟು ಕೊಟ್ಟು ಶಾಲೆಗೆ ಕಳಿಸಿದ್ದು ಒಂದು ರೀತಿಯ ಪರಿವರ್ತನೆಯೇ ಆಗಿದೆ'. ಆ ಜನಾಂಗದವರಿಗೆಲ್ಲಾ ಜೀವನದ ಬಗ್ಗೆ ತುಂಬಾ ಹೆದರಿಕೆ, ಎಲ್ಲಿ ಪೋಲಿಸರ ಕೈಗೆ ಸಿಗುತ್ತೇವೆಯೋ ಎಂಬ ಭಯ, ಅಂತಹ ಒಂದು ಪ್ರಸಂಗ ನೆನೆಯುತ್ತಾ

ಲೇಖಕರು "ನನಗಂತೂ ಪೋಲಿಸರನ್ನು ಕಂಡಾಗ ಯಮದೂತರ ನೆನಪಾಗುತ್ತಿತ್ತು. ಪೋಲಿಸರು ಮನೆ ತಪಾಸಣೆ ನಡೆಸಿದಾಗ, ಹೊಡೆಯುವಾಗ, ನಾನೆಷ್ಟೋ ಸಲ ಚಡ್ಡಿಯೊಳಗೆ ಹೇತಿದ್ದೇನೆ, ಉಚ್ಚೆ ಹೊಯ್ದಿದ್ದೇನೆ. ನಮ್ಮ ಜಾತಿ ಕಳ್ಳರನ್ನು ಪೋಲಿಸರಿಗೆ ಹಿಡಿದು ಕೊಡಲಾರಂಭಿಸಿದರು. ಜನ ಅಜ್ಜನನ್ನು ದ್ವೇಷಿಸಲಾರಂಭಿಸಿದರು. ಲಿಂಗಪ್ಪನ ಕಾರಣದಿಂದ ಕಳ್ಳತನ ಮಾಡಲು ಸಾಧ್ಯವಿಲ್ಲವೆಂದು, ಕೊನೆಗೊಂದು ರಾತ್ರಿ ಮನೆ ಛಾವಣಿಯನ್ನೆಲ್ಲ ಕಿತ್ತೆಸೆದು, ಅಜ್ಜನ ಬಾಯಿಗೆ ಅರಿವೆ ತುರಕಿ, ಕೊಡಲಿಯಿಂದ ಹೊಡೆದುಕೊಂದರು. ಯಾರಿಗೂ ತಿಳಿಯದಂತೆ ಸುಟ್ಟುಹಾಕಿದರು. ಅಂದಿನಿಂದ ಇಡೀ ಸಂಸಾರದ ಹೊಣೆ ಅಜ್ಜಿಯದು". ಇಂಥದೊಂದು ಕುಟುಂಬದಲ್ಲಿ ಬೆಳೆದು ಬಂದವರು ಗಾಯಕವಾಡರು. ಹೀನವಾದ ಪರಿಸರದಲ್ಲಿ, ಕಡು ಬಡತನದಲ್ಲಿ ಬದುಕುವ ಜನಾಂಗವಿದು.

ನಮ್ಮ ಮನೆ ಮೊದಲೇ ಚಿಕ್ಕದು. ನೊಣಗಳಂತೆ ವಾಸಿಸುವ ಮನೆಮಂದಿ. ಆಡಿನ ಪಕ್ಕದಲ್ಲೇ ನಮ್ಮ ಹಾಸಿಗೆ, ಚಳಿಗಾಲದಲ್ಲಿ ಗಡಗಡ ನಡುಗುತ್ತ ಒಂದೇ ಹೊದಿಕೆಯೊಳಗೆ ಸೇರುತ್ತಿದ್ದೆವು. ನಾಯಿಯೂ ನಮ್ಮ ಹಾಸಿಗೆಯೊಳಗೆ ತೂರುತ್ತಿತ್ತು. ಅದು ರಾತ್ರಿ ಉಚ್ಚೆ ಹೊಯ್ದರು ಬೆಚ್ಚಗೆನಿಸುತ್ತಿತ್ತು, ಮರುದಿನ ಮೂತ್ರದ ವಾಸನೆ ಬಂದರೂ ಅದನ್ನೆ ಹೊದ್ದುಕೊಳ್ಳುತ್ತಿದ್ದೆವು. ನಮ್ಮ ಮನಸ್ಸು ಸತ್ತಿದ್ದರಿಂದ ಏನು ಅನ್ನಿಸುತ್ತಿರಲಿಲ್ಲ. ಎನ್ನುವ ಮಾತು ಕೇಳಿದರೆ ಮನಸ್ಸಿಗೆ ಏನೋ ಒಂದು ರೀತಿ ಸಂಕಟವಾಗುತ್ತದೆ. ದಾರಿದ್ರ್ಯ, ಸಂಕಟ, ವೇದನೆಗಳಿಂದ ತುಂಬಿದ ಉಚಲ್ಯಾ ಜನರ ಅಂತರಂಗದ ಧ್ವನಿ ರೋಮಾಂಚನಗೊಳಿಸುತ್ತದೆ. ಉಚಲ್ಯಾ ಜನರ ಇಡೀ ಜೀವನ ಕ್ರಮಕ್ಕೂ, ಈ ಮಾನಸಿಕ ಸ್ಥಿತಿಗೂ ನೇರವಾದ ಸಂಬಂಧವಿದೆ. ಅಸ್ತಿತ್ವಕ್ಕೆ ಬೆಲೆ ಇಲ್ಲದೆ, ಅರ್ಥ ಕಳೆದುಕೊಂಡು ನಿರ್ಜೀವವಾಗಿರುವ ಇವರ ಬದುಕು ಭಯಾನಕವಾದುದು, ದಿಗ್ಭ್ರಮೆ ಹುಟ್ಟಿಸುವಂತಹದು. ಲಕ್ಷ್ಮಣ ಗಾಯಕವಾಡರು ಇಂತಹ ಕುಟುಂಬದಲ್ಲಿ ಹುಟ್ಟಿದರೂ ಶಾಲೆಗೆ ಹೋಗುತ್ತಾರೆ. ಆದರೆ ಅಲ್ಲಿ ಕೂಡಾ ಕಷ್ಟಗಳೇ ಎದುರಾಗುತ್ತವೆ. ಇದ್ದಕ್ಕಿದ್ದಂತೆ ಶಾಲೆಯ ಮಕ್ಕಳಿಗೆ ವಾಂತಿಭೇದಿ ಪ್ರಾರಂಭವಾಗುತ್ತದೆ. ಅದಕ್ಕೆ ಕಾರಣ ಲಕ್ಷ್ಮಣ ಗಾಯಕವಾಡರೇ ಎಂದು ಜನರೆಲ್ಲಾ ಪಂಚಾಯತಿ ಸೇರಿಸಿ, ಮಾರ್ತಾಂಡ ಊರು ಬಿಡಬೇಕು. ಇಲ್ಲವೆ ಮಗನನ್ನು ಶಾಲೆ ಬಿಡಿಸಬೇಕು ಎಂದು ತೀರ್ಮಾನಿಸುತ್ತಾರೆ. ಆದರೆ ಊರಿನವರಿಗೆ ತಿಳುವಳಿಕೆ ಹೇಳಿ ಡಾಕ್ಟರ್ ಕಾಯಿಲೆ ಕಡಿಮೆ ಮಾಡಿದ ಬಳಿಕ ಮತ್ತೆ ಶಾಲೆಗೆ ಹೋಗುತ್ತಾರೆ. ಇಂತಹ ಅನೇಕ ಅಪಮಾನ, ಆರೋಪಗಳನ್ನು ಸಹಿಸಿಕೊಂಡು ಬದುಕಬೇಕಾಗಿತ್ತು. ಎಷ್ಟೋ ಸಲ ಉಪವಾಸವಿರುವ ಪ್ರಸಂಗವು ಬರುತ್ತಿತ್ತೆಂದು ತಿಳಿಸುತ್ತಾರೆ. ಊಟಕ್ಕೆ ಮೀನು, ಏಡಿ, ಬೆಕ್ಕು, ಹಂದಿ ಎಲ್ಲವೂ ಭೋಜನದ ವಸ್ತುಗಳೆ, ತಿಂಗಳಿಗೊಮ್ಮೆ ಸ್ನಾನ ಇಲ್ಲದೆ ತಲೆಯಲ್ಲಿ ಕಜ್ಜಿಯಾಗಿ, ಕೀವು ತುಂಬಿತ್ತು' ಎಂದು ಹೇಳುವಲ್ಲಿ ಯಾವುದಕ್ಕೂ ಸಂಕೋಚ ಪಡದೇ ವಾಸ್ತವ ಬದುಕನ್ನೇ ಲೇಖಕರು ಜೀವನದಲ್ಲಿ ನಡೆದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅಲ್ಲದೆ ಕಳ್ಳತನವನ್ನು ಹೇಗೆ ಮಾಡುತ್ತಿದ್ದರು. ಸರ ಕತ್ತರಿಸುವುದು ಹೇಗೆ? ಮಾಲನ್ನು ಸುರಕ್ಷಿತವಾಗಿ ಪಾರು ಮಾಡುವುದು ಹೇಗೆ? ಮುಂತಾದ ತಮ್ಮ ಜನರ ವೃತ್ತಿಯ ವಿಷಯಗಳನ್ನು ತಿಳಿಸುತ್ತಾರೆ. ಮುಂದೆ ತಾಯಿ ತೀರಿಕೊಂಡ ಮೇಲೆ ಮನೆಯ ಪರಸ್ಥಿತಿ ತುಂಬಾ ಹದಗೆಡುತ್ತದೆ. ಒಂದು ಹೊತ್ತು ಊಟಕ್ಕೂ ಗತಿಯಿಲ್ಲದಂತಾಗುತ್ತದೆ. ಆದರೆ ತಂದೆ ಹೇಗೋ ಮಾಡಿ ಮಗನನ್ನು ಕಲಿಸಬೇಕೆಂಬ ಹಂಬಲದಿಂದ ಕಷ್ಟಪಟ್ಟು ಲಕ್ಷ್ಮಣರವರನ್ನು ಓದಲು ಕಳಿಸುತ್ತಾರೆ. ಒಮ್ಮೆ ಆಗಸ್ಟ್ 15 ರಂದು ಶಾಲೆಯಲ್ಲಿ ಉತ್ತಮವಾಗಿ ಭಾಷಣ ಮಾಡಿದ ಸುದ್ದಿ ಊರ ತುಂಬಾ ಹಬ್ಬಿದಾಗ, ಜನರ ಪ್ರೋತ್ಸಾಹ ದೊರೆಯುತ್ತದೆ. ಹೀಗಾಗಿ ಆ ಎಳೆ ಮನಸ್ಸಿಗೆ ಕಲಿತು ನೌಕರಿ ಮಾಡಬೇಕೆಂಬ ಆಸೆ ಹುಟ್ಟುತ್ತದೆ. ಏನೇ ಕಷ್ಟ ಬಂದರೂ ಓದುವುದನ್ನು ಮುಂದುವರಿಸುತ್ತಾರೆ.

ಬಾಲ್ಯದಲ್ಲಿ ಪಡೆದ ಹಲವಾರು ಅನುಭವಗಳನ್ನು, ಮನಮಿಡಿಯುವ ಪ್ರಸಂಗಗಳನ್ನು ಲೇಖಕರು ಇಲ್ಲಿ ನಿರೂಪಿಸಿದ್ದಾರೆ. ಮದುವೆ, ಸಮಾರಾಧನೆ ಇನ್ನಿತರ ಯಾವುದೇ ಕಾರ್ಯಕ್ರಮಗಳು ಊರಲ್ಲಿ ನಡೆದರೆ, ಕೈಯಲ್ಲಿ ಪಾತ್ರೆ ಹಿಡಿದು ಊಟಕ್ಕೆ ಹೋಗುತ್ತಿದ್ದರಂತೆ. ನೀರು ಕುಡಿಯದೆ ಹೊಟ್ಟೆ ಬಿರಿಯುವ ತನಕ ಉಣ್ಣುವುದು. ಏಕೆಂದರೆ ಇಂತಹ ಸಂದರ್ಭ ಪದೇ ಪದೇ ಸಿಗಬೇಕಲ್ಲ. ಇಂತಹ ಸಂದರ್ಭಗಳು ಅವರ ಹಸಿವಿನ ಬೇಗೆಯನ್ನು ತಿಳಿಸುತ್ತವೆ. "ಒಮ್ಮೆ ಧನೇಗಾಂವಿನಲ್ಲಿ ನಡೆದ ಸಮಾರಾಧನೆಗೆ ಹೋಗಿದ್ದೆವು. ವಾಡೇದ ಹಿಂದೆ ನಿಂತು, ನಮಗೂ ಬಡಿಸ್ಪೆಪೋ ಎಂದು ಜೋರಾಗಿ ಕೂಗುತ್ತಿದ್ದೆವು. ನಮ್ಮ ಪಕ್ಕದಲ್ಲಿ ನಿಂತ ನಾಯಿಗಳು ಪತ್ರಾವಳಿಗಾಗಿ ಕಚ್ಚಾಡುತ್ತಿದ್ದವು. ಒಂದು ಕಡೆ ನಾಯಿಗಳ ಕಿರಿಚಾಟ, ಇನ್ನೊಂದೆಡೆ ನಮ್ಮ ಒದರಾಟ," ಎನ್ನುತ್ತಾರೆ. ಜಾತ್ರೆ, ಸಂತೆ ನಡೆಯುವಲ್ಲಿ ಕಳ್ಳತನಕ್ಕೆ ಹೋಗುತ್ತಿದ್ದರು. ಅದನ್ನು ತಿಳಿದ ಪೋಲಿಸರು ಈ ಜನರ ಮೇಲೆ ದಾಳಿ ಮಾಡಿ ಹಣ ಕೀಳುತ್ತಿದ್ದರು, ಪೋಲಿಸರಿಗೆ ಹಣ ಕೊಡುವುದು, ಇಲ್ಲವೆ ಹೊಡೆತ ತಿನ್ನುವುದು, ಇದು ನಡೆಯುತ್ತಲೇ ಇರುತ್ತಿತ್ತು. ಒಮ್ಮೆ ಲೇಖಕರ ಅಜ್ಜ ಹರಿತವಾದ ಬ್ಲೇಡಿನಿಂದ ದೋತರ ಕತ್ತರಿಸಲು ಹೋಗಿ ತೊಡೆಯನ್ನೇ ಕತ್ತರಿಸಿದಾಗ, ತಿಂದ ಪೋಲಿಸರ ಹೊಡೆತದ ನೆನಪು ಮನಸ್ಸಿನಲ್ಲಿ ಹಾಗೆ ಉಳಿದಿದೆ. ಇದೆಲ್ಲಾ ತಿಳಿದು ಕಳ್ಳತನ ಮಾಡದಿದ್ದರೂ, ನಾನು ಅವ್ವ, ಕಳ್ಳತನ ಮಾಡದಿದ್ದರೂ ಉಚಲ್ಯಾ ಜಾತಿಯಲ್ಲಿ ಹುಟ್ಟಿದ ತಪ್ಪಿಗೆ ಪೋಲಿಸರ ಹೊಡೆತ ತಿನ್ನಬೇಕಾಗುತ್ತಿತ್ತು. ಶಾಲೆಗೆ ಹೋದ್ರೆ ಅಲ್ಲೂ ಮಕ್ಕಳು 'ಕಳ್ಳ ಬಂದವ್ರೋ ಕಳ್ಳ' ಎಂದು ಹಂಗಿಸುತ್ತಿದ್ದರು. ಎಂದು ಹೇಳುತ್ತಾರೆ. ಹಿರಿಯರು ಮಾಡುವ ತಪ್ಪಿಗೆ ಮಾಡದವರಿಗೂ ಆವರಿಸಿಕೊಳ್ಳುವುದರಿಂದ ಅವರ ಮನಸ್ಸಿನಲ್ಲಿ ಸಾಕಷ್ಟು ಪ್ರಶ್ನೆಗಳು ಏಳುತ್ತವೆ. "ತಮ್ಮ ಪಾರ್ಥರೂಡ ಬುಡಕಟ್ಟಿನ ಸಾಂಸ್ಕೃತಿಕ ಬದುಕು, ಅವರ ಮೇಲಾದ ಅನ್ಯಾಯ, ಅತ್ಯಾಚಾರ, ಉದರಪೋಷಣೆ, ಕಳ್ಳತನ ಮಾಡಿದರ ವಿವಿಧ ರೀತಿಯ ಸುಳಿವುಗಳು ಇವರ ಮೇಲೆ ಪೋಲೀಸ್ ದಾಳಿ, ದೌರ್ಜನ್ಯ, ಹಿಂಸೆ, ಶಿಕ್ಷೆ"[7] ಇನ್ನು ಮುಂತಾದವು. ಯಾವುದೇ ಸಾಕು ಪ್ರಾಣಿ ಮೇವು ಹಾಕದಿದ್ದರೆ ಕೂಗುತ್ತದೆ, ರಾತ್ರಿ ಹಸಿವಾದರೆ ಕಟ್ಟಿದ ಹಗ್ಗ ಕಿತ್ತೊಗೆದು ಹೊಲದಲ್ಲಿ ಬೆಳೆದ ಹಸಿರು ಫಸಲಿನ ಮೇಲೆ ದಾಳಿ ಮಾಡುತ್ತದೆ. ಕೆಲಸ ಸಿಗದ ನಾವು ಕಳ್ಳತನ ಮಾಡುತ್ತೇವೆ. ಹೀಗಿದ್ದರೂ ಇಡೀ ಜಾತಿಯ ಮೇಲೆ ಆರೋಪ ಹೊರಿಸುತ್ತಾರೆ? ನಮಗೇಕೆ ಯೋಗ್ಯವಾದ ರೀತಿಯಲ್ಲಿ ಬದುಕಲು ಬಿಡುತ್ತಿಲ್ಲ? ಸಾಲ ಮಾಡಿ ಪೋಲಿಸರಿಗೇಕೆ ಲಂಚಕೊಡುವ ಪರಿಸ್ಥಿತಿ ಬರುತ್ತದೆ. ಸಾಲ ಬಡ್ಡಿ ತೀರಿಸಲು ಅಣ್ಣಂದಿರೇಕೆ ಕಳ್ಳತನ ಮಾಡಬೇಕಾಗುತ್ತದೆ? ಇಂಥ ದುಸ್ಥಿತಿಯಲ್ಲಿ, ಪರಿಸರದಲ್ಲಿ ಬದುಕುವ ನಾವು ದೇಶಾಭಿಮಾನ, ಪರಂಪರೆಯ ಅಭಿಮಾನ ಬೆಳೆಸಿಕೊಳ್ಳಬೇಕೆ? ಮುಂತಾದ ಪ್ರಶ್ನೆಗಳು ನಿಜಕ್ಕೂ ಗಂಭೀರವಾದ ವಿಚಾರಗಳು, ಹೀಗೆ ಹಣೆಬರಹಕ್ಕೆ, ದೈವಕ್ಕೆ ಬೈಯುತ್ತಾ, ಉಚಲ್ಯಾ ಜಾತಿಯಲ್ಲಿ ಹುಟ್ಟಿದ್ದಕ್ಕಾಗಿ, ವೇದನೆಗಳನ್ನೆಲ್ಲಾ ಮೌನವಾಗಿ ನುಂಗುತ್ತಾ, ಶಿಕ್ಷಣವನ್ನು ಪಡೆಯುತ್ತಾ ಬೆಳೆಯುತ್ತಾರೆ. ಇವರ ಅಜ್ಜ, ಅಜ್ಜಿ, ಅಣ್ಣಂದಿರಿಗೆಲ್ಲಾ ಜೈಲುವಾಸ ಹೊಸದೇನಲ್ಲ, ಆದರೆ ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳದೆ ಗಾಯಕವಾಡರು ಶಾಲೆಗೆ ಹೋಗುತ್ತಿದ್ದರು. ಹಸಿದ ಹೊಟ್ಟೆ ತುಂಬಿಸಿಕೊಳ್ಳಲು ಜೇನು ಹುಡುಕುತ್ತಾ ಅಲೆದಾಡುವುದು. ಪಕ್ಷಿಗಳ ತತ್ತಿ ಸಿಕ್ಕರೆ ಸುಟ್ಟು ತಿನ್ನುವುದು, ಗೆಡ್ಡೆ-ಗೆಣಸು ಅಗೆದು ತಿನ್ನುವುದು, ಹಾದಿಯಲ್ಲಿ ಹೊರಟಾಗ ಹೊಲದಲ್ಲಿ ಬೆಳೆದ ತೆನೆ ಕದ್ದು ರೊಟ್ಟಿ ಮಾಡಿಸಿಕೊಂಡು ತಿನ್ನುವುದು, ಹೇಗೋ ಹಸಿವನ್ನು ಹಿಂಗಿಸಿಕೊಂಡು ಶಾಲೆ ಕಲಿಯುತ್ತಿದ್ದರಂತೆ. ರವಿವಾರ ರಜೆಯಿದ್ದಾಗ ಮೀನು ಹಿಡಿಯುವುದು, ತಪ್ಪಿದರೆ ಹೇನು ಕುಕ್ಕುತ್ತಾ ಕಾಲ ಕಳೆಯುವುದು. ಮೈ ತುಂಬಾ ಹೇನು ಆಗಿ ರಕ್ತ ಬರುವಂತೆ ಕರೆಯುವುದು, ಇಲ್ಲವೆ ಹೇನು, ಶೂರೆ ಕೊಲ್ಲಲು ಹೊಳೆ ದಂಡೆಯ ಕಾದ ಉಸುಕಿನಲ್ಲಿ ಬೆತ್ತಲೆಯಾಗಿ ಮಲಗುವುದು ಹೀಗೆ ಮುಂತಾದ

ಬಾಲ್ಯದ ನೆನಪುಗಳು ಇದ್ದಕ್ಕಿದ್ದಂತೆ ಮೂಡಿ ಬಂದಿವೆ. ಲೇಖಕರು ಇಂತಹ ವಿಷಯವನ್ನು ಹೇಳಲು ಅಸಹ್ಯ ಪಟ್ಟುಕೊಳ್ಳದೆ. ಸಹೃದಯರಿಗೆ ತಮ್ಮ ಬಗ್ಗೆ ಏನನ್ನಿಸಬಹುದೆಂದು ವಿಚಾರಿಸದೆ, ಯಾವುದೇ ವಿಷಯವನ್ನು ಮುಚ್ಚಿಟ್ಟುಕೊಳ್ಳದೆ, ಆಡು ಮಾತಿನಲ್ಲಿಯೇ ಪ್ರಾಮಾಣಿಕವಾಗಿ ವ್ಯಕ್ತ ಪಡಿಸಿದ್ದಾರೆ. ಭಾಬಳಗಾಂವನಲ್ಲಿ ಶಾಲೆಗೆ ಹೋಗುತ್ತಿರುವಾಗ ಕಾಲಲ್ಲಿ ಚಪ್ಪಲಿ ಕೂಡಾ ಇರಲಿಲ್ಲವಂತೆ. ಬಿಸಿಲಿಗೆ ಸುಡುತ್ತಿದ್ದ ಕಾಲಿಗೆ ರಕ್ಷಣೆ ಕೊಡಲು, ರಟ್ಟಿನ ತಳಕ್ಕೆ ರಬ್ಬರಿನ ಪಟ್ಟಿ ಜೋಡಿಸಿ, ತಿರುಗಾಡಲು ಪ್ರಯತ್ನಿಸುತ್ತಾರೆ, ಅದನ್ನು ಕಂಡು ಇತರರು ಚೇಷ್ಟೇ ಮಾಡುತ್ತಿದ್ದರಂತೆ. ಇಂತಹ ಪರಿಸ್ಥಿತಿಯಲ್ಲಿಯೂ ಗಾಯಕವಾಡರು ಹಿಂಜರಿಯದ ಮುನ್ನುಗ್ಗಿದ್ದಾರೆ. ಗುರೂಜಿ, ಬುದ್ಧ, ಮಹಾವೀರನ ಚರಿತ್ರೆ ಓದಿದ್ದಾರೆ. ಒಮ್ಮೆ ಇಂದಿರಾಗಾಂಧಿಗೆ ಪತ್ರ ಬರೆಯುವ ಸಾಹಸಕ್ಕೂ ಕೈ ಹಾಕುತ್ತಾರೆ. ದಿನಾಲು ದೇವಸ್ಥಾನದಲ್ಲಿ ಕುಳಿತು ಭಜನೆ ಮಾಡವುದು, ಕೇಳುವುದು, ಹಾಡು ಕಲಿಯುವುದರಿಂದ ಮನಸ್ಸಿನಲ್ಲಿ ಪರಿವರ್ತನೆಯಾಗುತ್ತದೆ. ಏಡಿ ಸಾರು ತಿನ್ನುವುದು ಪಾಪವೆನಿಸುತ್ತದೆ. ಭಿಕ್ಷೆ ಬೇಡಿ ಉಣ್ಣುವುದರ ಬದಲು ಮೈಮುರಿದು ದುಡಿಯಬೇಕೆನಿಸಿತು. ಆಗ ನೂಲುವ ಗಿರಣಿಯಲ್ಲಿ ಕೆಲಸ ಹುಡುಕಿಕೊಂಡು ದುಡಿಯಲು ಪ್ರಾರಂಭಿಸಿದಾಗ ಜೀವನದಲ್ಲೊಂದು ಹೊಸ ತಿರುವು ಸಿಗುತ್ತದೆ. ಮುಂದೆ ನೌಕರಿಯು ದೊರೆತಾಗ ಜನ ಅವರನ್ನು ಮುಟ್ಟಲು ಗೌರವಿಸಲು ಪ್ರಾರಂಭಿಸಿದಾಗ ಗಾಯಕವಾಡರ ಬದುಕಿನಲ್ಲಿ ಏನೋ ಒಂದು ಸುಖದ ಕಳೆ ಕಂಡುಬರುತ್ತದೆ. ಮುಂದೆ ಲೇಖಕರು ತಾವು ಒಂದು ಹುಡುಗಿಯನ್ನು ಪ್ರೀತಿಸಿದ ವಿಷಯವನ್ನು ಸಂಕೋಚವಿಲ್ಲದೆ ಹೇಳುತ್ತಾರೆ. ಅವಳಿಗೆ ಪ್ರೇಮಪತ್ರ ಬರೆದದ್ದು, ಅದು ಹುಡುಗಿಯ ತಂದೆಗೆ ಗೊತ್ತಾಗಿ ಪತ್ರಕ್ಕೆ ಬೆಂಕಿ ಹಚ್ಚಿ, ಮಗಳ ಗಲ್ಲವನ್ನು ಸುಟ್ಟ ಪ್ರಸಂಗವನ್ನು ಭಾವನೆಗಳ ಬಗ್ಗೆ ಪ್ರಸ್ತಾಪಿಸುತ್ತಾರೆ. 'ಉಚಲ್ಯಾ' ಈ ಆತ್ಮಕಥನವು ಮಹಾರಾಷ್ಟ್ರದ ಆಸುಪಾಸಿನಲ್ಲಿರುವ ದಲಿತ ಪ್ಯಾಂಥರರ ಕಥನವೂ ಆಗಿದೆ. 'ಉಚಲ್ಯಾ'ವು ಕಳ್ಳತನವನ್ನೇ ಜೀವನದಲ್ಲಿ ಪ್ರಧಾನ ಕಸುಬಾಗಿಸಿಕೊಂಡಿದ್ದ ಅಲೆಮಾರಿ ಸಮುದಾಯದ ವ್ಯಕ್ತಿಯಾದ ಲಕ್ಷ್ಮಣ ಗಾಯಕವಾಡರ ಸವಿಸ್ತಾರವಾದ ಚಿತ್ರಣವಾಗಿದೆ. ಆ ಜನಾಂಗದವರ ಹಸಿವು, ದಾರಿದ್ರ್ಯ, ನಿರುದ್ಯೋಗ ಹಾಗೂ ಅಪರಾಧಿ ಜನಾಂಗ ಎಂಬ ಹಣೆಪಟ್ಟಿಗಳು ತಮಗಾಗಿಯೇ ಇವೆ, ಹಾಗಾಗಿಯೇ ಅವೆಲ್ಲವುಗಳ ಹೊಣೆ ಹೊರುವವರು ನಾವೇ ಆಗಿದ್ದೇವೆ ಎಂಬಂತೆ ನೋವು ಅನುಭವಿಸಿದ್ದಾರೆ ಎಂಬುದನ್ನು ಆತ್ಮಕಥನ ಸ್ಪಷ್ಟೀಕರಿಸುತ್ತದೆ. ಸಾವಿರಾರು ವರ್ಷಗಳಿಂದಲೂ ದಲಿತರನ್ನು ಸಮಾಜದ ತಳವರ್ಗದಲ್ಲಿ ಕಾಣುವುದರ ಜೊತೆಗೆ ಅನ್ಯಾಯ, ಅನಾಚಾರ, ಅನೈತಿಕವಾಗಿ ದುಡಿಸಿಕೊಂಡು, ಅವರು ಯಾವುದೇ ರಂಗದಲ್ಲೂ ಸುಧಾರಣೆಗೆ ಒಳಪಡದೇ ಬದಿಗೊತ್ತಿರುವುದರ ವಿರುದ್ಧ ಹೋರಾಡಿದ ಕಥಾನಕವಾಗಿ ಉಚಲ್ಯಾ ಬಿಂಬಿತವಾಗಿದೆ. ಮನುಷ್ಯ ಮನುಷ್ಯನಾಗಿ ಬದುಕಲು ಇರುವ ಸಾಮಾನ್ಯ ಹಕ್ಕುಗಳನ್ನು ಕಸಿದುಕೊಂಡು ವಂಚಿತರನ್ನಾಗಿಸಿದರ ವಿರುದ್ಧದ ಹೋರಾಟದ ಕಿಡಿಯಾಗಿ 'ಉಚಲ್ಯಾ' ಆತ್ಮಕಥನ ಒಡಮೂಡಿದೆ.

**ಸಮಾರೋಪ**

ಒಟ್ಟಾರೆ ಹೇಳುವುದಾದರೆ ಗೌರ್ಮೆಂಟ್ ಬ್ರಾಹ್ಮಣ ಮತ್ತು ಉಚಲ್ಯಾ ಆತ್ಮಕಥೆಗಳ ಲೇಖಕರ ಅನುಭವಗಳನ್ನು ನೇರವಾಗಿ ಓದುಗನ ಹೃದಯವನ್ನು ಮುಟ್ಟುವಂತೆ ಗ್ರಾಮೀಣ ಪರಿಸರದ ಭಾಷೆ ಮತ್ತು ಪ್ರಾಂತೀಯ ರಚನಾಶೈಲಿಯನ್ನು ಹೊಂದಿದ್ದು, ಹೊಸ ಜಗತ್ತಿಗೆ ಕರೆದೊಯ್ಯುವ ವಿಶಿಷ್ಟ ಕೃತಿಗಳಾಗಿ ಮೂಡಿಬಂದಿವೆ. ಈ ದಲಿತ ಆತ್ಮಕಥೆಗಳ ಮೂಲಕ ವ್ಯಕ್ತವಾಗಿರುವ ಬಡತನ, ಊಟಕ್ಕಿಲ್ಲದ ಪರಿಸ್ಥಿತಿ, ಸಾಮಾಜಿಕ ಅಸಮಾನತೆಯ ವಿರುದ್ಧ ನಡೆಸಿದ ಹೋರಾಟದಲ್ಲಿ ಸಮಾನತೆಯ ಕಡೆಗೆ ಮುಖ ಮಾಡುವುದನ್ನು ಸ್ಪಷ್ಟಪಡಿಸಬಹುದು. ಸಾಮಾಜಿಕವಾಗಿ ಒಬ್ಬ ಮನುಷ್ಯ ತನ್ನ ಬದುಕನ್ನು ಕಟ್ಟಿಕೊಳ್ಳಲಿಕ್ಕೆ

ಇರುವ ಬಿಕ್ಕಟ್ಟುಗಳನ್ನು ಆತ್ಮಕಥೆಗಳ ಮೂಲಕ ಗಮನಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಅರವಿಂದ ಮಾಲಗತ್ತಿ. *ಗೌರ್ಮೆಂಟ್ ಬ್ರಾಹ್ಮಣ.* ಓದುವ ಮುನ್ನ ಓದುಗರೊಂದಿಗೆ (ಮುನ್ನುಡಿ)
2. ನಾಗಾರ್ಜುನ ಹಾ.ಮ, ವಿದ್ಯಾವತಿ ಜಿ ರಜಪೊತ್. *ಆತ್ಮಕಥನ ಸಂಘರ್ಷದ ವಿಭಿನ್ನ ನೆಲೆ.* ಪು. 15
3. ಅರವಿಂದ ಮಾಲಗತ್ತಿ. ಪೂರ್ವೋಕ್ತ. ಪು.4
4. ಅದೇ. ಪು. 9
5. ಲಕ್ಷ್ಮಣ ಗಾಯಕವಾಡ. *ಉಚಲ್ಯಾ.* ಪು.13
6. ಕೆಂಗಾಪೊರ್, ಎಸ್.ಕೆ. *ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ.* ಪು.ಸಂ.257
7. ಹರಿಲಾಲ ಪವಾರ. *ಮರಾಠಿ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳು.* ಪು. 63

**ಪರಾಮರ್ಶನ ಗ್ರಂಥಗಳು**


- ಅಪ್ಪಗೆರೆ ಸೋಮಶೇಖರ್. (2014). ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ. ಮೈಸೂರು ವಿಶ್ವವಿದ್ಯಾಲಯ.
- ಅರವಿಂದ ಮಾಲಗತ್ತಿ. (2002). *ದಲಿತ ಮಾರ್ಗ.* ಕನ್ನಡ ಪುಸ್ತಕ ಪ್ರಾಧಿಕಾರ.
- ಅರವಿಂದ ಮಾಲಗತ್ತಿ. (2009). *ಗೌರ್ಮೆಂಟ್ ಬ್ರಾಹ್ಮಣ.* ಚೇತನ ಬುಕ್ ಹೌಸ್.
- ಹರಿಲಾಲ ಪವಾರ. (2007). *ಮರಾಠಿ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳು.* ಕರ್ನಾಟಕ ವಿಶ್ವವಿದ್ಯಾಲಯ.
- ಕೆಂಗಾಪೂರ್, ಎಸ್.ಕೆ. (1997). *ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ.* ಸಂಶೋಧನಾ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ.
- ಲಕ್ಷ್ಮಣ ಗಾಯಕವಾಡ. (1994). *ಉಚಲ್ಯಾ.* ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೆಟ್ ಲಿಮಿಟೆಡ್.
- ನಾಗಾರ್ಜುನ, ಹಾ.ಮ., ವಿಧ್ಯಾವತಿ ಜಿ ರಜಪೂತ್. (2016). *ಆತ್ಮಕಥನ ಸಂಘರ್ಷದ ವಿಭಿನ್ನ ನೆಲೆ.* ದಶ ಪ್ರಕಾಶನ.
- ಶೋಭಾ ನಾಯಕ. (2023). *ಕನ್ನಡಾನುವಾದಿತ ಮರಾಠಿ ಆತ್ಮಕಥನಗಳು.* ಅಮೃತ ಉಪನ್ಯಾಸ ಮಾಲೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ.